

ಊದುಬತ್ತಿ ಹಚ್ಚಿದರೆ ದೇವರು ಬರುವುದಿಲ್ಲ, ಸೊಳ್ಳೆಗೆಂದು ಊದುಬತ್ತಿ ಹಚ್ಚಿದರೆ ಸೊಳ್ಳೆಯೂ ಹೋಗುವುದಿಲ್ಲ' ಎಂದು ಹೇಳುತ್ತಿದ್ದ ಗೆಳೆಯನ ಮಾತು ನೆನಪಿಗೆ ಬಂತು.

ಈ ಧೂಮವೇದಿಗಳ ಉಸಾಬರಿ ಬಿಟ್ಟು ಸುಪ್ರಸಿದ್ಧ ಕಂಪನಿಯು ಹೊರತಂದಿದ್ದ 'ಶುಭರಾತ್ರಿ' ಎನ್ನುವ ಸಣ್ಣ ಬಾಟಲ್‌ನಲ್ಲಿರುವ ಚಿಮ್ಮುವ ದ್ರಾವಣ ತಂದೆ. ಅದನ್ನು ವಿದ್ಯುತ್ತಿನ ಸ್ವಿಚ್‌ಬೋರ್ಡ್‌ಗೆ ಹಾಕಿದರೆ ಅತೀ ಸೂಕ್ಷ್ಮರೂಪದಲ್ಲಿ ದ್ರಾವಣವನ್ನು ಸಿಂಪರಣೆ ಮಾಡುತ್ತಿತ್ತು. ಅದರ ಪರಿಮಳ ಒಂಥರಾ ಚಲೋ ಇತ್ತು. ನಿದ್ರೆ ಆವರಿಸಿದ್ದೇ ತಿಳಿಯಲಿಲ್ಲ. ಅಂತೂ 'ಶುಭರಾತ್ರಿ'ಯಿಂದ ನಿದ್ರೆ ಶುಭವಾಗಿಬಿಟ್ಟಿತು ಅಂದುಕೊಂಡು ಬೆಳಗ್ಗೆ ಎದ್ದು ಇನ್ನೂ ಹಾಸಿಗೆಯಲ್ಲಿರುವಾಗ ಭುಜದ ಮೇಲೆ, ಕೊರಳ ಮೇಲೆ, ಟೊಂಕದ ಮೇಲೆ ತುರಿಸುವಂತಾಗುತ್ತಿತ್ತು. ಆಕಳಿಸುತ್ತ, ತುರಿಸುತ್ತ ನಿದ್ದೆಗಣ್ಣಲ್ಲಿ ನೋಡಿದರೆ ಮೆಕ್ಕೆಜೋಳದ ಕಾಳಿನಷ್ಟು ಗಾತ್ರದ ಗಾದರಿ(ಬೊಬ್ಬೆ) ಎದ್ದುಬಿಟ್ಟಿದ್ದವು! 'ಶುಭರಾತ್ರಿ' ನಮಗೋ... ಸೊಳ್ಳೆಗೋ... ಯೋಚಿಸುತ್ತಾ ಮೇಲೆದ್ದೆ.

ಸೊಳ್ಳೆಗಳ ನಿಯಂತ್ರಣಕ್ಕೆ ಇನ್ನೂ ಏನೇನು ಉಪಾಯಗಳಿವೆ ನೋಡಿಯೇ ಬಿಡೋಣವೆಂದು ಒಂದು ಜನರಲ್ ಸ್ಟೋರ್‌ಗೆ ಹೋದರೆ ಅಂಗಡಿಯಾತ ಎಲ್ಲವನ್ನು ನನ್ನೆದುರು ಹರವಿದನು. 1. ಮೈಗೆ ಸವರುವ ಕ್ರೀಮು: ಸೊಳ್ಳೆ ಮೈಗಲ್ಲ, ನಮ್ಮ ಮೈಗೆ ಇದನ್ನು ಹಚ್ಚಿಕೊಳ್ಳಬೇಕು. 2. ರೋಲ್ ಆನ್ ಫ್ಯಾಬ್ರಿಕ್ 4 ಡಾಟ್ಸ್. ಇದು ಚಿಕ್ಕ ಬಾಟಲಿಯಲ್ಲಿರುವ ದ್ರಾವಣ. ಈ ಹನಿಗಳನ್ನು ಎರಡೂ ಮೊಣಕಾಲ ಬಳಿ, ಎರಡೂ ಭುಜದ ಬಳಿ ಹೀಗೆ, ಬಟ್ಟೆಯ ಮೇಲೆ ನಾಲ್ಕು ಹನಿಗಳನ್ನು ಇರಿಸಿಕೊಳ್ಳುವುದು. ಅದರ ಕಡು ವಾಸನೆಗೆ ನನಗೆ ತಲೆಸುತ್ತ ಬಂದಂತಾಯಿತು. 3. ಮ್ಯಾಜಿಕ್ ಕಾರ್ಡ್ ಅಥವಾ ಫಾಸ್ಟ್ ಕಾರ್ಡ್: ಇಸ್ಪೀಟ್ ಕಾರ್ಡ್ ಗಾತ್ರದ ಹತ್ತು ಕಾಗದ ತುಣಕು ಹೊಂದಿರುವಂತದ್ದು. ಒಂದೊಂದು ಕಾರ್ಡನ್ನು ಹರಿದು ಉರಿಸಬೇಕು. 4. ರಿಚಾರ್ಜಬಲ್ ಮಸ್ಕಿಟೊ ಬ್ಯಾಟ್. ಅಂಗಡಿಯವನು ತೋರಿಸಿದ ಎಲ್ಲವುಗಳ ಮಧ್ಯೆ ನನಗೆ ಇದು ಬಹಳ ಮಜ ಅನ್ನಿಸಿತು. ಅಂಗಡಿಯವನು ಆ ರಾಕೆಟ್‌ನ ಹ್ಯಾಂಡಲ್‌ನಲ್ಲಿಯ ಸ್ವಿಚ್ ಅದುಮಿಕೊಂಡು ಸೊಳ್ಳೆ ಇರುವಲ್ಲಿ ಅದನ್ನು ಆಡಿಸಿಬಿಟ್ಟರೆ ರಾಕೆಟ್ಟಿನ ಜಾಳಿಗೆಗೆ ಸಿಕ್ಕು ಚಟಚಟನೆ ಸಿಡಿದು ಸಾಯುತ್ತಿದ್ದವು.

ಮನೆಗೆ ಬಂದವನೇ ಹುಚ್ಚಾಪಟ್ಟೆ ಖುಷಿಯಿಂದ ಸೊಳ್ಳೆಯ ಅಡಗುತಾಣಗಳನ್ನು ಸಂಶೋಧಿಸಿದೆ. ಬಾಗಿಲಿನ ಹಿಂಭಾಗ, ಬೀರುವಿನ ಹಿಂಭಾಗ, ಕಳಚಿ ಹಾಕಿದ ಬಟ್ಟೆಗಳಲ್ಲಿ, ಮೂಲೆ ಮುಡುಕು ಮಾಡುಗಳಲ್ಲಿ ಅವಿತು ಕುಳಿತಿದ್ದವುಗಳನ್ನು ಕೈಯಾಡಿಸಿ ಬಯಲಿಗೆ ಬರಮಾಡಿಕೊಂಡೆ. ಕೈಯಲ್ಲಿರುವ ವಜ್ರಾಯುಧವನ್ನು ಸೋಕಿಸಿದರೆ ಸಾಕು, ಬೆಂಕಿಗೆ ಬಿದ್ದ ಪತಂಗದಂತೆ ಸಿಡಿಸಿಡಿದು ನಿರ್ನಾಮವಾಗುತ್ತಿದ್ದವು. ಮನೆಯ ಪ್ರತಿ ಮೂಲೆಯನ್ನು ಬಿಡದೆ ಅಟ್ಟಾಡಿಸಿಕೊಂಡು ಹೋದದ್ದರಿಂದ ಹೊಸ ರಾಕೆಟ್ ಎಲ್ಲ ಸೊಳ್ಳೆಗಳನ್ನು ಆಪೋಶನ ತೆಗೆದುಕೊಂಡುಬಿಟ್ಟಿತು! ಎಷ್ಟೊಂದು ಸೊಳ್ಳೆಗಳ ಮಾರಣಹೋಮ ಮಾಡಿಬಿಟ್ಟೆನಲ್ಲ... ಸ್ವಲ್ಪ ಹೊತ್ತು ಕುಳಿತು ಯೋಚಿಸತೊಡಗಿದೆ. ನಾನು ಮಾಡಿದ್ದು ಸರಿಯೇ? ಕಳಬೇಡ ಕೊಲಬೇಡ ಅಂತ ಅಣ್ಣ ಹೇಳಿದ ಮಾತನ್ನು, ಅಹಿಂಸಾ ಪರಮೋ ಧರ್ಮ ಎಂಬುದನ್ನು ಬಹುವಾಗಿ ನಂಬುವವನು ನಾನು. ಈಗ ಎಷ್ಟೊಂದು ಕ್ರೂರವಾಗಿ ವರ್ತಿಸಿದೆ... ವಿಪರೀತ ಹಿಂಸೆಗಿಳಿದುಬಿಟ್ಟೆನಲ್ಲ ಅನ್ನಿಸತೊಡಗಿತು. ಅದೇ ಹೊತ್ತಿಗೆ ಸೊಳ್ಳೆಗಳು ಮಾಡಿದ ಹಿಂಸೆಯೇನು ಕಡಿಮೆಯೇ ಎನ್ನುವ ಸಮರ್ಥನೆ ನನ್ನಲ್ಲಿ ಮೂಡತೊಡಗಿತು. ನನ್ನ, ನನ್ನ ಮನೆಯವರೆಲ್ಲರ ರಕ್ತ ಹೀರಿದ ಸೊಳ್ಳೆಗಳದ್ದು ಹಿಂಸೆಯ ಪರಮಾವಧಿ. ಆದ್ದರಿಂದ ನಾನು ಎಸಗಿದ್ದು ಯಾವ ದುಷ್ಕೃತ್ಯವೂ ಅಲ್ಲ, ಸ್ವಯಂರಕ್ಷಣೆಗಾಗಿ ಕೈಗೊಳ್ಳುವ ಕಾರ್ಯದಲ್ಲಿ ಹುಳುಕು ಹುಡುಕುವುದೇನು ಬಂತು ಎಂದು ಸಮಾಧಾನಪಟ್ಟುಕೊಂಡೆ.